## ಮುಖರತಿ: ಎಚ್ಚರ!

ನೀವು 50 ವರ್ಷದೊಳಗಿನವರಾದರೆ ಸಂಗಾತಿ ಜತೆ ಮುಖರತಿಗೆ ತೊಡಗುವ ಮುನ್ನ ಇದನ್ನೊಮ್ಮೆ ಓದಿ ಬಿಡಿ. ಮುಖರತಿ (ಓರಲ್ ಸೆಕ್ಸ್) ಸಂದರ್ಭದಲ್ಲಿ ಹರಡುವ ವೈರಾಣು ಗಂಟಲು ಕ್ಯಾನ್ಸರ್‌ಗೆ ಕಾರಣವಾಗಬಹುದು ಎಂದು ಕೊಲಂಬಸ್‌ನ ಒಹಿಯೋ ವಿಶ್ವವಿದ್ಯಾಲಯದ ವಿಜ್ಞಾನಿಗಳು ಹೇಳಿದ್ದಾರೆ.

ಅಸುರಕ್ಷಿತ ಲೈಂಗಿಕತೆ ಸಂದರ್ಭದಲ್ಲಿ ಹ್ಯೂಮನ್ ಪ್ಯಾಪಿಲೊಮಾ ವೈರಸ್ (ಎಚ್‌ಪಿವಿ) ಎಂಬ ವೈರಾಣು ಬಾಯಿ ಹಾಗೂ ಗಂಟಲು ಕ್ಯಾನ್ಸರ್‌ಗೆ ಕಾರಣವಾಗುತ್ತದಂತೆ. ಕಳೆದ ಒಂದು ದಶಕದಲ್ಲಿ ಇದರ ಪ್ರಮಾಣ ಹೆಚ್ಚಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಸರ್ವೈಕಲ್ ಕ್ಯಾನ್ಸರ್‌ಗೆ ಶೇಕಡಾ 70ರಷ್ಟು ಎಚ್‌ಪಿವಿ ಕಾರಣ ಎಂಬ ವಿಷಯ ದೃಢಪಟ್ಟಿದೆ. 2008ರಿಂದ ಈಚೆಗೆ ಈ ವೈರಾಣು ಹರಡದಂತೆ 12-13ವರ್ಷದ ಬಾಲಕಿಯರಿಗೆ ಲಸಿಕೆ ನೀಡಲಾಗುತ್ತಿದೆ.

ಆದರೆ ಇದೀಗ ಬಾಯಿ ಹಾಗೂ ಗಂಟಲು ಕ್ಯಾನ್ಸರ್‌ಗೂ ಇದೇ ವೈರಾಣು ಕಾರಣ ಎಂಬುದು ವಿಜ್ಞಾನಿಗಳ ನಿದ್ದೆಗೆಡಿಸಿದೆ. ಗಂಟಲು ಹಾಗೂ ಬಾಯಿ ಕ್ಯಾನ್ಸರ್‌ಗೆ ಅತಿಯಾದ ಕುಡಿತ, ಧೂಮಪಾನ ಹಾಗೂ ತಂಬಾಕು ಜಗಿಯುವುದು ಕಾರಣ ಎಂದು ತಿಳಿದಿದ್ದ ವೈದ್ಯರು ಈಗ ಹೊಸ ಮಾಹಿತಿಯಿಂದ ಅಚ್ಚರಿ ಪಡುತ್ತಿದ್ದಾರೆ. ಹದಿಹರೆಯದ ಯುವತಿಯರಂತೆ ಯುವಕರೂ ಸಹ ಎಚ್‌ಪಿವಿ ವಿರುದ್ಧ ಹೋರಾಡುವ ಲಸಿಕೆ ಹಾಕಿಸಿಕೊಳ್ಳುವ ಮೂಲಕ ಈ ರೋಗ ಹರಡದಂತೆ ತಡೆಯಲು ವೈದ್ಯರು ಕರೆ ನೀಡಿದ್ದಾರೆ.

ಆದರೆ ಎಚ್‌ಪಿವಿಗೆ ಈಗ ನೀಡುತ್ತಿರುವ ಲಸಿಕೆಗೆ ಕ್ಯಾನ್ಸರ್ ತಡೆಯುತ್ತದೆಯೇ ಎಂಬುದು ಇನ್ನೂ ದೃಢಪಟ್ಟಿಲ್ಲ. 'ಶೇಕಡಾ 90ರಷ್ಟು ಮಟ್ಟಿಗೆ ಈ ಲಸಿಕೆಯನ್ನು ನಂಬಬಹುದು' ಎನ್ನುತ್ತಾರೆ ವಿಜ್ಞಾನಿಗಳು. ಏನೇ ಇರಲಿ, ಸುರಕ್ಷಿತ ಲೈಂಗಿಕತೆ ಹಾಗೂ ಮುಖರತಿ ಉತ್ತಮ ವಿಧಾನ ಎಂದು ಹೇಳಲು ಈ ವಿಜ್ಞಾನಿಗಳು ಮರೆಯುವುದಿಲ್ಲ.

## ಪುರುಷನ ಫಲವತ್ತತೆ ಮೂಳೆಯಲ್ಲಿ ಪತ್ತೆ

ಪುರುಷರ ಫಲವತ್ತತೆ ವೃದ್ಧಿಸುವ ಶಕ್ತಿ ಆತನ ಅಸ್ಥಿಯಲ್ಲೇ ಇದೆ ಎಂದು ಕೊಲಂಬಿಯಾ ವಿಶ್ವವಿದ್ಯಾಲಯದ ವೈದ್ಯಕೀಯ ಕೇಂದ್ರ ಹೇಳಿದೆ.

ಈವರೆಗೂ ಮೂಳೆ ಹಾಗೂ ಸಂತಾನೋತ್ಪತ್ತಿ ವ್ಯವಸ್ಥೆ ನಡುವಿನ ಸಂಬಂಧ ಕೇವಲ ಮೂಳೆಯ ಬೆಳವಣಿಗೆಗೆ ಸಂಬಂಧಪಟ್ಟಿತ್ತು ಎಂದೇ ತಿಳಿಯಲಾಗಿತ್ತು. ಆದರೆ ಪ್ರಯೋಗಾಲದಯಲ್ಲಿ ನಡೆಸಿದ ಪರೀಕ್ಷೆಯಲ್ಲಿ ಸಿಕ್ಕ ಉತ್ತರ ಮತ್ತೇನನ್ನೋ ಹೇಳುತ್ತಿತ್ತು. ಇದಕ್ಕಾಗಿ ಕೇಂದ್ರದ ವೈದ್ಯರು ಕೆಲ ಪ್ರಯೋಗಗಳನ್ನು ನಡೆಸಿದರು. ಪುರುಷರ ದೇಹದಲ್ಲಿ ಸಂತಾನೋತ್ಪತ್ತಿಗೆ ಅಗತ್ಯವಿರುವ ಸ್ಟೆರಾಯ್ಡ್ ಟೆಸ್ಟಿರಾನ್ ಬಿಡುಗಡೆಯಾಗುತ್ತದೆ. ಇದರೊಂದಿಗೆ ಆಸ್ಟಿಯೋಕಾಲ್ಸಿನ್ ಜೀವಕೋಶಗಳನ್ನು ಸೇರುತ್ತದೆ. ಈ ಹಂತದಲ್ಲಿ ಬಿಡುಗಡೆಯಾದ ಟೆಸ್ಟಿರಾನ್‌ನ ಪ್ರಮಾಣ ವೃದ್ಧಿಸುತ್ತದೆ. ಅದರಂತೆ ಆಸ್ಟಿಯೋಕಾಲ್ಸಿನ್ ಕಡಿಮೆಯಾಗುತ್ತಿದ್ದಂತೆ ಟೆಸ್ಟಿರಾನ್‌ನ ಪ್ರಮಾಣವೂ ಕಡಿಮೆಯಾಗುತ್ತದೆ. ಜತೆಗೆ ವೀರ್ಯಾಣು ಸಂಖ್ಯೆಯಲ್ಲೂ ಸಾಕಷ್ಟು ಇಳಿಮುಖವಾಗುತ್ತದೆ. ಇದು ಕೇವಲ ಪುರುಷರಲ್ಲಿ ಮಾತ್ರ. ಕೆಲ ಪುರುಷರಿಗೆ ಸಂತಾನೋತ್ಪತ್ತಿ ಸಮಸ್ಯೆ ಹೆಚ್ಚಾಗಿ ಕಾಡುತ್ತಿರುತ್ತದೆ. ಇದಕ್ಕೆ ಕಾರಣವೂ ಮೂಳೆಯೇ ಇರಬಹುದು ಎಂದು ಕೊಲಂಬಿಯಾ ವಿಶ್ವವಿದ್ಯಾಲಯದ ವೈದ್ಯರು ಹೇಳುತ್ತಾರೆ.

ಆದರೆ ಈವರೆಗಿನ ವಾದಗಳನ್ನು ಗಮನಿಸಿದರೆ. ಮೂಳೆಗಳ ಬೆಳವಣಿಗೆಗೆ ಈಸ್ಟ್ರೋಜೆನ್ (ಮಹಿಳೆಯರ ಸಂತಾನೋತ್ಪತ್ತಿ ಹಾರ್ಮೋನ್) ಸಹಾಯಕ ಎಂದು ಹೇಳಲಾಗುತ್ತಿತ್ತು. ಏಕೆಂದರೆ ಮಹಿಳೆಯರು ಋತುಚಕ್ರ ನಿಲ್ಲುವವರೆಗೂ ಅವರ ಮೂಳೆಗಳು ಬಲಿಷ್ಠವಾಗಿರುವುದು, ನಂತರದ ಹಂತಗಳಲ್ಲಿ ಮೂಳೆಗಳ ಸಮಸ್ಯೆ ಕಾಡುವುದು ಈ ವಾದಕ್ಕೆ ಪುಷ್ಟಿ ನೀಡಿತ್ತು. ಆದರೆ ಈ ಅಧ್ಯಯನದ ಪ್ರಕಾರ ಮಹಿಳೆಯರ ಮೂಳೆಗೂ ಹಾಗೂ ಅವರ ಸಂತಾನೋತ್ಪತ್ತಿಗೂ ಯಾವುದೇ ಸಂಬಂಧವಿಲ್ಲ ಎನ್ನಬಹುದು.

## ಗಾಯ ನೋಡುವುದರಿಂದ ನೋವು ಹೆಚ್ಚಾಗುತ್ತದೆ!

ಅಪಘಾತಕ್ಕೀಡಾದಾಗ ಗಾಯವಾದ ಅಥವಾ ನೋವಾದ ಜಾಗವನ್ನೇ ನೋಡುವುದರಿಂದ ನೋವು ಹೆಚ್ಚಾಗುತ್ತದಂತೆ. ಇಂಥದ್ದೊಂದು ಸಂಶೋಧನೆ ನಡೆಸಿ ಯಶಸ್ವಿಯಾದವರು ಲಂಡನ್‌ನ ಮಿಲನ್ ಬಿಕೊಕ್ಕಾ ವಿಶ್ವವಿದ್ಯಾಲಯದ ವಿಜ್ಞಾನಿಗಳು.

ಇದಕ್ಕಾಗಿ 18ಸ್ವಯಂಸೇವಕರನ್ನು ಪ್ರಯೋಗಕ್ಕೆ ಬಳಸಿಕೊಳ್ಳಲಾಯಿತು. ಪ್ರತಿಯೊಬ್ಬರ ಕೈಗೂ ಬಿಸಿಗಾಳಿಯನ್ನು ಹಾಯಿಸಲಾಯಿತು. ಕ್ಷಣಕ್ಷಣಕ್ಕೂ ಬಿಸಿ ಏರಿಸಲಾಗುತ್ತಿತ್ತು. ಜೊತೆಗೆ ತಾಪಮಾನವನ್ನೂ ದಾಖಲಿಸಲಾಗುತ್ತಿತ್ತು.

ಇದೇ ವೇಳೆಗೆ ಪ್ರತಿಯೊಬ್ಬರೂ ತಮಗಾಗುವ ನೋವನ್ನು ವ್ಯಕ್ತಪಡಿಸಲು ಹಾಗೂ ಅದನ್ನು ದಾಖಲಿಸಲು ಕೈಗೊಂದು ಸಾಧನವನ್ನೂ ನೀಡಲಾಯಿತು. ಬೆಂಕಿಯ ಶಾಖ ಹೆಚ್ಚಾದಂತೆಲ್ಲಾ ಪ್ರಯೋಗಕ್ಕೆ ಒಳಪಟ್ಟವರು ಮುಖ ಅತ್ತ ತಿರುಗಿಸಿಕೊಳ್ಳಲು ಆರಂಭಿಸಿದರು. ಈ ಸಂದರ್ಭದಲ್ಲಿ ವಿಜ್ಞಾನಿಗಳು, ಪ್ರತಿನಿಧಿಗಳು ಮುಖ ನೋಡಿಕೊಳ್ಳಲು ಕನ್ನಡಿಗಳನ್ನು ಇಟ್ಟರು. ಆಗ ಪ್ರತಿನಿಧಿಗಳ ನೋವು ಹೆಚ್ಚಾಗಿದ್ದು ಕಂಡುಬಂತು.


ಮತ್ತೊಂದು ಪ್ರಯೋಗ ನಡೆಸಿದ ವಿಜ್ಞಾನಿಗಳು, ಈ ಬಾರಿ ಉರಿ ತಾಗುತ್ತಿರುವ ಕೈಗಳನ್ನು ನೋಡಿಕೊಳ್ಳಲು ಬೂತುಕನ್ನಡಿಯನ್ನು ನೀಡಿದರು. ಆಗ ಅವರಿಗೆ ಕೈಗಳು ದೊಡ್ಡದಾಗಿ ಕಂಡು ನೋವು ಹೆಚ್ಚಾಗುತ್ತಿರುವುದು ಅರಿವಿಗೆ ಬಂತು. ಇನ್ನೊಮ್ಮೆ ಉಬ್ಬುಗಾಜುಗಳನ್ನು ನೀಡಲಾಯಿತು. ಈಗ ಪ್ರತಿನಿಧಿಗಳಿಗೆ ಅವರ ಕೈಗಳು ಸಣ್ಣಗೆ ಕಂಡವು. ಅದರಂತೆ ನೋವೂ ಸಹ ಕಡಿಮೆಯಾಗಿದ್ದು ವಿಜ್ಞಾನಿಗಳ ಗಮನಕ್ಕೆ ಬಂತು.

ಈ ಎಲ್ಲಾ ಅಂಶಗಳನ್ನು ಗಮನಿಸಿದ ವಿಜ್ಞಾನಿಗಳು, ನೋವು ಹಾಗೂ ದೇಹದ ಆಕಾರಕ್ಕೆ ನೇರವಾದ ಸಂಬಂಧ ಇದ್ದು, ಅದನ್ನು ನೋಡುವುದರಿಂದ ಮನಸ್ಸಿಗೆ ಆಗುವ ನೋವು ಹೆಚ್ಚುತ್ತಾ ಅಥವಾ ಇಳಿಯುತ್ತಾ ಹೋಗುತ್ತದೆ ಎಂದು ಹೇಳಿದರು.

ಮೆದುಳಿನ ದೃಷ್ಟಿ ಜಾಲ ಹಾಗೂ ಮದುಳಿನ ನೋವಿನ ಜಾಲ ಎರಡೂ ಬಹಳ ವಿಚಿತ್ರವಾಗಿ ವರ್ತಿಸಿರುವುದನ್ನು ಈ ವಿಜ್ಞಾನಿಗಳು ದಾಖಲಿಸಿದ್ದಾರೆ.

■ ಐಎಎನ್‌ಎಸ್

ಈಗ !!
ಗಣಿತ, ಇಂಗ್ಲಿಷ್, ಮತ್ತು ವಿಜ್ಞಾನ ನನಗೆ ಸರಳವೆನಿಸುತ್ತದೆ.




ಬೈದ್ಯನಾಥ್
ಶಂಖಪುಷ್ಪಿ
ಅತ್ಯುತ್ತಮ ಜ್ಞಾಪಕ ಶಕ್ತಿ ವರ್ಧನೆ ಟಾನಿಕ್

- ಬ್ರಾಹ್ಮಿ ಜ್ಞಾಪಕ ಶಕ್ತಿಯನ್ನು ಹೆಚ್ಚಿಸುತ್ತದೆ-ಕೇಂದ್ರ ಔಷಧಿ ಸಂಶೋಧನಾ ಸಂಸ್ಥೆಯು ಇದನ್ನು ಪ್ರಮಾಣೀಕರಿಸಿದೆ.
- ಬೈದ್ಯನಾಥ್ ಶಂಖಪುಷ್ಪಿಯು ಏಕಾಗ್ರತೆ, ಜ್ಞಾಪಕ ಶಕ್ತಿ, ಚುರುಕುತನ, ಗಮನ ಕೇಂದ್ರೀಕರಣ ಇತ್ಯಾದಿಯನ್ನು ಹೆಚ್ಚಿಸುತ್ತದೆ.

ಅತ್ಯುತ್ತಮ ಫಲಿತಾಂಶಗಳಿಗಾಗಿ.... ವರ್ಷ ಪೂರ್ತಿ..... ಪ್ರತಿ ದಿನ ಸೇವಿಸಿ.....!!!